# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1165 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್ ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಮನಗರ ನಗರಸಭಾ ವ್ಯಾಪ್ತಿಗೆ ಬರುವ ಅರ್ಕಾವತಿ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಸೇತುವೆಯ (ವಾರ್ಡ್ ನಂ.06 ರಿಂದ ವಾರ್ಡ್ ನಂ.27ಕ್ಕೆ ಸಂಪರ್ಕ ಕಲ್ಪಿಸುವ) ಕಾಮಗಾರಿ ಆದೇಶ ಯಾರಿಗೆ ನೀಡಲಾಗಿದೆ (ಪ್ರತಿ ನೀಡುವುದು) ಗುತ್ತಿಗೆ ವಹಿಸಿರುವ ಮೊತ್ತ ಎಷ್ಟು; ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಇದುವರೆವಿಗೂ ಆಗಿರುವ ಆರ್ಥಿಕ ಪ್ರಗತಿಗಳು ಯಾವುವು; (ಮಾಹಿತಿ ಒದಗಿಸುವುದು) | 2021-22 ಸಾಲಿನ ಎಸ್‌ಎಫ್‌ಸಿ ವಿಶೇಷ ಅನುದಾನದಡಿಯಲ್ಲಿ, ರಾಮನಗರ ನಗರಸಭಾ ವ್ಯಾಪ್ತಿಗೆ ಬರುವ ಅರ್ಕಾವತಿ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಸೇತುವೆ ಕಾಮಗಾರಿಗೆ ದಿನಾಂಕ: 20.03.2023 ರಂದು ಶ್ರೀ ಸುಧಾಕರ್ ದಾಸು ಶೆಟ್ಟಿ ರವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಕಾರ್ಯದೇಶದ ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ.<br>ಗುತ್ತಿಗೆಗೆ ವಹಿಸಿರುವ ಮೊತ್ತ ರೂ.3,56,38,779/- (ಜಿ.ಎಸ್.ಟಿ ಒಳಗೊಂಡಂತೆ) ಕಾಮಗಾರಿಯನ್ನು ದಿನಾಂಕ:20.12.2024 ರಂದು ಪೂರ್ಣಗೊಳಿಸಲು ಕಾರ್ಯಾದೇಶದಲ್ಲಿ ತಿಳಿಸಲಾಗಿರುತ್ತದೆ. ಯಾವುದೇ ಆರ್ಥಿಕ ಪ್ರಗತಿಗಳು ಆಗಿರುವುದಿಲ್ಲ. |
| ಆ) | ಕಾಮಗಾರಿಯನ್ನು ನಿಗಧಿತ ಕಾಲಾವಧಿಯಲ್ಲಿ ಪೂರ್ಣಗೊಳಿಸದಿರುವ ಹಾಗೂ ಪ್ರಸ್ತುತ ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು; | ಅರ್ಕಾವತಿ ನದಿಗೆ ಹೊಂದಿಕೊಂಡಿರುವ ಸರ್ವೇ ಜಮೀನುಗಳಿಗೆ ಮೇಲ್ನೋಟಕ್ಕೆ ಒತ್ತುವರಿಯಾಗಿರುವುದು ಕಂಡು ಬಂದಿರುವುದರಿಂದ ಅದನ್ನು ಸರ್ವೇ ಮಾಡಿ ವರದಿ ನೀಡುವಂತೆ ತಹಶೀಲ್ದಾರ್ ರವರಿಗೆ ತಿಳಿಸಲಾಗಿದೆ ಹಾಗೂ ಸೇತುವೆ ಕಾಮಗಾರಿ ನಡೆಯುವ ಸ್ಥಳದಲ್ಲಿ ದೊಡ್ಡ ಗಾತ್ರದ ಬಂಡೆಗಳಿದ್ದು, ಅದಕ್ಕೆ ಅನುಗುಣವಾಗಿ EIRL ಅಂದಾಜು ಪಟ್ಟಿಯನ್ನು ತಯಾರಿಸಿ, ಅನುಮೋದನೆ ಪಡೆದು ಪುನ: ಕಾಮಗಾರಿಯನ್ನು ಪ್ರಾರಂಭಿಸಲು ತಡವಾಗಿರುತ್ತದೆ. |
| ಇ) | ಕಾಮಗಾರಿಗೆ ನಿಗಧಿತ ಅವಧಿಯಲ್ಲಿ ಅನುದಾನ ನೀಡದಿರುವುದರ ಪ್ರಯುಕ್ತ ಗುತ್ತಿಗೆದಾರರಿಗೆ ಮುಂದಿನ ಕಾಮಗಾರಿ ಕೈಗೊಳ್ಳುವುದಕ್ಕೆ ಯಂತ್ರೋಪಕರಣಗಳ ವೆಚ್ಚ ಮತ್ತು ಕೆಲಸಗಾರರ ವೆಚ್ಚ ದುಬಾರಿಯಾಗುವುದಿಲ್ಲವೇ; | ಸದರಿ ಕಾಮಗಾರಿಗೆ ಯಂತ್ರೋಪಕರಣಗಳ ವೆಚ್ಚ ಮತ್ತು ಕೆಲಸಗಾರರ ವೆಚ್ಚ ದುಬಾರಿಯಾಗುವುದಿಲ್ಲ. |
| ಈ) | ಆಗಿದ್ದಲ್ಲಿ, ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿ ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದೇ? | ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದ್ದು, ಹಂತ ಹಂತವಾಗಿ ಅಥವಾ ಪೂರ್ಣಗೊಂಡ ನಂತರ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು. |

ಸಂಖ್ಯೆ: ನಅಇ 88 ಎಸ್‌ಎಫ್‌ಸಿ 2025

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು.

# ನಗರಸಭಾ ಕಾರ್ಯಾಲಯ, ರಾಮನಗರ

## ರಾಮನಗರ ಜಿಲ್ಲೆ– 562159

*Web: www.ramanagaracity.mrc.gov.in* — *Ph: No: 080-27271286*

*Email ID: itstaff_ulb_ramanagaram@yahoo.com* — *Helpline No: 080-27276070*


ಸಂ. ನಸರಾ/ತಾ.ವಿ/ಟೆಂಡರ್/SFC spl/ಸಿಆರ್/140315/2022-23 — ದಿನಾಂಕ: 20-03-2023

### –: ಕಾರ್ಯಾದೇಶ :–

ರವರಿಗೆ,

Mr. Sudhakar Dasu shetty,
(M/s Mugrody constructions),
"Mugrody Enclave", Gandhinagar,
Kavoor, Mangalore-575015.

**DMA/2022-23/BG/WORK_INDENT140315**

ವಿಷಯ: ರಾಮನಗರ ನಗರಸಭಾ ವ್ಯಾಪ್ತಿಯ ಹೊಳೆ ಬೀದಿಯಿಂದ ಬಿ.ಎಂ. ರಸ್ತೆಗೆ ಸಂಪರ್ಕಿಸಲು ಅರ್ಕಾವತಿ ನದಿಗೆ ಸೇತುವೆ ನಿರ್ಮಾಣ ಕಾಮಗಾರಿ.

ಉಲ್ಲೇಖ:
1. ಮಾನ್ಯ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ರಾಜಿನಕೋ/ಎಂಯುಎನ್(1)/SFC(ವಿಶೇಷ)/ರಾಮನಗರ/ಸಿಆರ್/109/2018–19, ದಿನಾಂಕ: 13–09–2022.
2. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: ನಸರಾ/ತಾ.ಶಾ./SFC spl/ಟೆಂಡರ್/ಸಿಆರ್/04/2022–23, ದಿ: 19–11–2022.
3. ಮಾನ್ಯ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ ರವರ ಆರ್ಥಿಕ ಬಿಡ್ ಅನುಮೋದನೆ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ರಾಜಿನಕೋ/ಎಂಯುಎನ್(1) /SFC(ವಿಶೇಷ)/ರಾಮನಗರ/ ಸಿಆರ್/198/2021–22, ದಿನಾಂಕ: 21.02.2023.

*** *** ***

| | | |
|---|---|---|
| 1 | ಒಪ್ಪಂದದ ದಿನಾಂಕ | 16–03–2023 |
| 2 | ಕಾಮಗಾರಿಯನ್ನು ಆರಂಭಿಸಬೇಕಾದ ದಿನಾಂಕ | 21–03–2023 |
| 3 | ಕಾಮಗಾರಿಯನ್ನು ಪೂರ್ಣಗೊಳಿಸಬೇಕಾದ ಅವಧಿ | 9 ತಿಂಗಳು |
| 4 | ಕಾಮಗಾರಿಯನ್ನು ಪೂರ್ಣಗೊಳಿಸಬೇಕಾದ ದಿನಾಂಕ | 20–12–2024 |
| 5 | ಅಂದಾಜು ಮೊತ್ತ | ರೂ. 375.00 ಲಕ್ಷ |
| 6 | ಲೆಕ್ಕ ಶೀರ್ಷಿಕೆ | 2021–22ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನ |
| 7 | ಟೆಂಡರ್ ಅನುಮೋದಿತ ಗುತ್ತಿಗೆ ಮೊತ್ತ | ರೂ. 3,02,02,355 + 18% ಜಿ.ಎಸ್.ಟಿ. |

ಮೇಲ್ಕಂಡ ಕಾಮಗಾರಿಯ ಜೊತೆ ಲಗತ್ತಿಸಿರುವ ಬಿ.ಓ.ಕ್ಯೂ ನಲ್ಲಿ ನಮೂದಿಸಿರುವ ದರಗಳನ್ನು 2021-22ನೇ ಸಾಲಿನ ಬೆಂಗಳೂರು ವೃತ್ತದ ದರಗಳಿಗೆ ಹೋಲಿಸಿದಾಗ ಶೇ. 3.23 ರಷ್ಟು ಕಡಿಮೆ ದರವನ್ನು ನಮೂದಿಸಿರುವ ಶ್ರೀ ಸುಧಾಕರ್ ದಾಸು ಶೆಟ್ಟಿ, ಮೆ॥ ಮುಗ್ರೋಡಿ ಕನ್ಸ್ಟ್ರಕ್ಷನ್ಸ್, ಮಂಗಳೂರು ರವರಿಗೆ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಕಾಮಗಾರಿಯನ್ನು ವಹಿಸಿಕೊಡಲಾಗಿದೆ. ಸದರಿ ಕಾಮಗಾರಿಯನ್ನು 9 ತಿಂಗಳೊಳಗಾಗಿ ಪೂರ್ಣಗೊಳಿಸಲು ಸೂಚಿಸಿದೆ. ಕಾಮಗಾರಿಯ ಒಟ್ಟು ಮೌಲ್ಯ ರೂ. 3,56,38,779/- (ಜಿ.ಎಸ್.ಟಿ. ಒಳಗೊಂಡಂತೆ) ಗಳಿಗೆ ಮೀರದಂತೆ ನಿರ್ವಹಿಸಲು ಸೂಚಿಸಿದೆ.

<u>ನಿಬಂಧನೆಗಳು:</u>

1. ಗುತ್ತಿಗೆದಾರರು KW-4 ನ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನಲ್ಲಿನ ಎಲ್ಲಾ ಸೂಚನೆ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
2. ಕಾಮಗಾರಿಯನ್ನು ಪೂರ್ಣಗೊಂಡ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ನಿರ್ವಹಣೆಯನ್ನು KW ನಿಯಮಗಳಂತೆ ಎರಡು ವರ್ಷದವರೆಗೆ ನೀವೇ ಯಾವುದೇ ಹೆಚ್ಚುವರಿ ವೆಚ್ಚ ನಿರೀಕ್ಷಿಸದೆ ನಿರ್ವಹಿಸತಕ್ಕದ್ದು. ಆ ದೃಷ್ಟಿಯಿಂದ ಉತ್ತಮ ಗುಣಮಟ್ಟದ ಕಾಮಗಾರಿ ನಿರ್ವಹಿಸಲು ಸೂಚಿಸಿದೆ.
3. ಭದ್ರತಾ ಠೇವಣಿಯನ್ನು ನಿಗಧಿತ ಅವಧಿಯ ನಂತರ ಕೆಲಸದ ಗುಣಮಟ್ಟವನ್ನು ಪರೀಕ್ಷಿಸಿ ತೃಪ್ತಿಕರವಾಗಿದ್ದಲ್ಲಿ ಮಾತ್ರ ವಾಪಸ್ ನೀಡಲಾಗುವುದು.
4. ಕಾಮಗಾರಿಯನ್ನು ನಿಮಗೆ ವಹಿಸಿರುವ ಟೆಂಡರ್ ದರಗಳಂತೆ ನಿರ್ವಹಿಸುವುದು. ಯಾವುದೇ ಕಾರಣಕ್ಕೆ ಅಂದರೆ ಸಾಮಾಗ್ರಿಗಳ ಬೆಲೆ ಮಾರುಕಟ್ಟೆಯಲ್ಲಿ ಹೆಚ್ಚಳವಾದರೂ ಸಹ ನಿಮಗೆ ಹೆಚ್ಚಿನ ದರಗಳನ್ನು ನಗರಸಭೆ ವತಿಯಿಂದ ನೀಡಲಾಗುವುದಿಲ್ಲ.
5. ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ಆಗಬಹುದಾದ ಯಾವುದೇ ಅಕ್ಕ-ಪಕ್ಕದವರ ಆಸ್ತಿ ಹಾನಿ/ಗುತ್ತಿಗೆದಾರರ/ಕೆಲಸಗಾರರ/ಸಿಬ್ಬಂದಿಯ ಪ್ರಾಣ ಹಾನಿಗಳಿಗೆ ನೀವೇ ಸಂಪೂರ್ಣ ಜವಾಬ್ದಾರರಾಗಿರುತ್ತೀರಿ. ಈ ಸಂದರ್ಭದಲ್ಲಿ ಉಂಟಾಗಬಹುದಾದ ಯಾವುದೇ ಖಟ್ಲೆ/ದಾವೆಗಳಿಗೆ ತಾವೇ ಸಂಪೂರ್ಣ ಜವಾಬ್ದಾರರಾಗಿರುತ್ತೀರಿ.
6. ನಗರಸಭೆ ಅಧಿಕಾರಿಗಳು ಕಾಲ-ಕಾಲಕ್ಕೆ ನೀಡುವ ಎಲ್ಲಾ ಸಲಹೆ ಸೂಚನೆಗಳನ್ನು ಪಾಲಿಸುವುದು. ನಿಮಗೆ ನೀಡಲಾಗುವ ಎಲ್ಲಾ ನೋಟೀಸ್‌ಗಳಿಗೆ ಕೂಡಲೇ ಉತ್ತರಿಸುವುದು ಹಾಗೂ ಒಂದು ವೇಳೆ ಉತ್ತರ ನೀಡದಿದ್ದಲ್ಲಿ ನಿಮ್ಮ ವಿರುದ್ಧ ಕಾನೂನು ಅನುಸರಿಸಿ ಕ್ರಮಕೈಗೊಳ್ಳಲಾಗುವುದು.
7. ಪ್ರಗತಿಯಾದ ಕಾಮಗಾರಿಗೆ ಚಾಲ್ತಿ ಅಥವಾ ಅಂತಿಮ ಬಿಲ್‌ನ್ನು ನೀಡುವ ಮುಂಚೆ ಮೂರನೇ ವ್ಯಕ್ತಿಯ ತಪಾಸಣಾ ವರದಿಯನ್ನು ಪಡೆದು ನಂತರ ಬಿಲ್‌ನ್ನು ಪಾವತಿಸಲು ಕ್ರಮಕೈಗೊಳ್ಳಲಾಗುವುದು.
8. ನಿಯಮಾನುಸಾರ ಐಟಿ/ವ್ಯಾಟ್/ಎಸ್.ಟಿ/ರಾಯಲ್ಟಿ ಹಾಗೂ ಇನ್ನಿತರೆ ಅನ್ವಯವಾಗುವ ಸೂಕ್ತ ತೆರಿಗೆಗಳನ್ನು ಹಿಡಿದುಕೊಳ್ಳಲಾಗುವುದು.
9. ಸರ್ಕಾರದ ಇತ್ತೀಚಿನ ಆದೇಶದಂತೆ ಲೇಬರ್ ಸೆಸ್‌ನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಡಿತಗೊಳಿಸಲು ಕ್ರಮಕೈಗೊಳ್ಳಲಾಗುವುದು.

10. [illegible] Section 6, Sl No 41, Pg.no. 35 of KW 4 ರ ರೀತ್ಯಾ ಪ್ರತಿಶತ ಗುತ್ತಿಗೆ ಮೊತ್ತದ ಶೇ. 0.1 ರಷ್ಟು (ಗರಿಷ್ಠ 10%) ಮೊತ್ತವನ್ನು ನಿಮಗೆ ನೀಡುವ ಬಿಲ್‌ನಲ್ಲಿ ಕಟಿತಗೊಳಿಸಲಾಗುವುದು.

11. ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ, ಮಧ್ಯಂತರದಲ್ಲಿ ಹಾಗೂ ಪೂರ್ಣಗೊಂಡ ನಂತರ ಎಲ್ಲಾ ಹಂತದಲ್ಲಿ ಛಾಯಾ ಚಿತ್ರಗಳನ್ನು ಹಾಜರುಪಡಿಸತಕ್ಕದ್ದು.

12. ಪಾರದರ್ಶಕ ನಿಯಮದಂತೆ ಕಾಮಗಾರಿ ವಿವರ ಹಾಗೂ ಅಂದಾಜು ಮೊತ್ತ ನಮೂದಿಸಿರುವ ಬಗ್ಗೆ ವಿವರಗಳನ್ನು ಫಲಕದಲ್ಲಿ ಬರೆಯಿಸಿ ಅಳವಡಿಸುವುದು.

13. ಕಾಮಗಾರಿಗೆ ಉಪಯೋಗಿಸುವ ಸಾಮಗ್ರಿಗಳ ಗುಣಾತ್ಮಕ ಪರೀಕ್ಷೆ ಮಾಡಿಸಿದ ನಂತರ ಕಾಮಗಾರಿ ಪ್ರಾರಂಭಿಸತಕ್ಕದ್ದು ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ ಕಾಮಗಾರಿಯ ಗುಣಮಟ್ಟದ ದೃಢೀಕರಣ ಪತ್ರವನ್ನು ನೀಡತಕ್ಕದ್ದು.

14. ಕಾಮಗಾರಿಯನ್ನು ಅಂದಾಜು ಪತ್ರಿಕೆಯಲ್ಲಿರುವ ಪ್ರಮಾಣಕ್ಕೆ ಅನುಗುಣವಾಗಿರತಕ್ಕದ್ದು ಅಥವಾ ಕಾಮಗಾರಿಯ ಸ್ಥಳಕ್ಕನುಗುಣವಾಗಿ ಕಛೇರಿಯ ಕಿರಿಯ ಅಭಿಯಂತರರ/ಸಹಾಯಕ ಕಾರ್ಯಪಾಲಕ ಅಭಿಯಂತರರ ನಿರ್ದೇಶನದಂತೆ ನಿರ್ವಹಿಸಿ, ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿ, ವರದಿ ಸಲ್ಲಿಸತಕ್ಕದ್ದು.

ಈ ಕಾರ್ಯಾದೇಶ ಪಡೆದ 2 ದಿವಸದ ಒಳಗಾಗಿ ಕಿರಿಯ ಅಭಿಯಂತರರು ರವರನ್ನು ಸಂಪರ್ಕಿಸಿ ಕಾಮಗಾರಿಯನ್ನು ಪ್ರಾರಂಭಿಸುವುದು.

ತಮ್ಮ ವಿಶ್ವಾಸಿ,

ಪೌರಾಯುಕ್ತರು,
ನಗರಸಭೆ, ರಾಮನಗರ.

For M... ...uctions

Ma... / Partner